ವೊರಿ... ಹೆದರಿಕೊಳ್ಳುವುದೇನೂ ಇಲ್ಲ' ಎಂದು ಗುರುಪಾದನಿಗೇ ಧೈರ್ಯ ಹೇಳಿ ಮತ್ತೆ ನಿಧಾನವಾಗಿ ತನ್ನ ಚೀಲ ಹಿಡಿದು ತನ್ನ ಕಂಪ್ಯೂಟರ್ ಕಡೆಗೆ ನಡೆದಳು. ಅವಳದ್ದೇ ಪ್ರೊಜೆಕ್ಟ್ ಮೀಟಿಂಗ್ ಆದರೂ ಯಾರೂ ಅವಳನ್ನು ಕರೆಯುವ ಸಾಹಸಕ್ಕೆ ಕೈ ಹಾಕಲಿಲ್ಲ. ಮೀಟಿಂಗ್‌ನಲ್ಲಿ ಕೂತ ಗುರುಪಾದನಿಗೆ ಮಾತ್ರ ಯಾವ ವಿಷಯವೂ ತಲೆಯ ಒಳಕ್ಕೆ ಹೋಗಲಿಲ್ಲ. 'ಎಷ್ಟು ಕಠೋರವಾಗಿ ಸೀಯೊನಳ ಬಗ್ಗೆ ಈ ಮೂರು ವಾರ ವಿಚಾರ ಮಾಡಿದೆ. ಎಲ್ಲರನ್ನೂ ಅದೇ ಹಳೆಯ ಅಕ್ಕಿ ಅಳೆಯುವ ಸಿದ್ದೆಯಲ್ಲಿ ಇನ್ನೂ ಯಾಕೆ ಅಳೆಯುತ್ತಿದ್ದೇನೋ... ನನಗೇ ಅರ್ಥವಾಗುತ್ತಿಲ್ಲ... ಎಷ್ಟು ಬೇಗ ಅವಳು ಬಸುರಿಯೂ ಆದಳು, ಬಾಣಂತಿಯೂ ಆದಳಲ್ಲ. ಎಲ್ಲ ಆ ಇಡಗುಂಜಿ ಮಹಾಗಣಪತಿಯ ಇಚ್ಛೆ... ದೇವರು ಅವಳಿಗೆ ಇದರಿಂದ ಹೊರಬರುವ ಶಕ್ತಿ ಕೊಡಲಿ' ಎಂದು ಮೀಟಿಂಗಿನಲ್ಲೇ ಮನದಲ್ಲಿ ಪ್ರಾರ್ಥಿಸಿ ಒಮ್ಮೆ ಕಣ್ಣು ಮುಚ್ಚಿ ಆ ದೇವರ ಅಭಿಷೇಕದ, ಅಲಂಕಾರದ, ಪೂಜೆಯ ಪ್ರಭೆಯ ಆಕಾರವನ್ನು ಅಸ್ಪಷ್ಟವಾದರೂ ಹತ್ತಿರ ತಂದುಕೊಳ್ಳಲು ಪ್ರಯತ್ನಿಸಿದ. ಅಜ್ಜಿ ಹೇಳುತ್ತಿದ್ದ 'ಹತ್ತು ಮಕ್ಕಳಿದ್ದರೂ ಸತ್ತಮಗನ ನೋವು ಯಾವತ್ತಾದೂ ಹೋಗ್ತನಾ?...' ಎನ್ನುವುದು ನೆನಪಾಗಿ ಶೌಚಾಲಯಕ್ಕೆ ಹೋಗಿ ಮುಖಕ್ಕೆ ಇಷ್ಟು ನೀರು ಹಾಕಿಕೊಂಡು ಬಂದ.

ಎರಡು ಮೂರು ದಿನ ಸೀಯೊನ್ ಯಾವ ಪ್ರೊಜೆಕ್ಟ್ ಮೀಟಿಂಗ್‌ಗೆ ಬರಲಿಲ್ಲ. ಯಾವತ್ತೂ ತನ್ನ ಸೀಟಿನ ಮೇಲೆ ಸುಮ್ಮನೇ ಕುಳಿತುಕೊಂಡು ಹತ್ತಿರ ಯಾರಾದರೂ ಬಂದರೆ ಬೆಳ್ಳಗೆ ನಗುತ್ತಿದ್ದಳು. ಇಬ್ಬರ ಮಧ್ಯೆ ಎಲ್ಲವದನ್ನೂ ತಿಳಿದವರಂತೆ ಎಲ್ಲರೂ ಭೇಟಿಯಾಗಿ ಹೋಗುತ್ತಿದ್ದರು. ಯಾರೂ ಇಲ್ಲದೇ ಇದ್ದಾಗ ಕಂಪ್ಯೂಟರ್ ಸ್ಕ್ರೀನನ್ನು ನೋಡುತ್ತಿರುವುದನ್ನು ಮಾಡುತ್ತಿದ್ದಳು. ಆಗ ಕಂಪ್ಯೂಟರ್ ಹ್ಯಾಂಗ್ ಅಥವಾ ಪ್ರೊಸೆಸ್ ಆಗುವಾಗ ಸ್ಕ್ರೀನಲ್ಲಿ ಚಕ್ರ ತಿರುಗುವಂತೇ ಅವಳ ಮುಖ ಮುಖ್ಯವಾಗಿ ಕಣ್ಣುಗಳಲ್ಲಿ ಎಲ್ಲೂ ಒಂದು ಕಡೆ ಫೋಕಸ್ ಆಗದೇ ಶೂನ್ಯವೂ ಪ್ರಶ್ನಾರ್ಥಕ ಚಿಹ್ನೆಯೂ ಮೂಡುತ್ತಿತ್ತು. ಆದರೂ ನಾಲ್ಕನೇ ದಿನಕ್ಕೆ ಗುರುಪಾದನಲ್ಲಿ ಬಂದು 'ನನಗೆ ಕೊಟ್ಟ ಕೆಲಸ ಮಾಡುತ್ತಿದ್ದೇನೆ... ಸಹಾಯ ಬೇಕಿದ್ದರೆ ಕೇಳುವೆ' ಎಂದು ಹೇಳಿ ತನ್ನ ಕಂಪ್ಯೂಟರ್ ಕಡೆಗೆ ನಡೆದಳು. ಈ ಮಾತು ಗುರುಪಾದನಿಗೆ ಅವಳ ಎಲ್ಲಾ ಹಿಂದಿನ ಮಾತಿಗಿಂತ ನೋವಾಯಿತು. ಆದರೂ ಸಣ್ಣ ನಗುವಿನೊಂದಿಗೆ 'ಹಾಗೇ ಆಗಲಿ' ಎಂದು ಸೂಚ್ಯವಾಗಿ ತಿಳಿಸಿ ಕಳುಹಿಸಿ ಕೊಟ್ಟ. ಮುಂದೆ ಮೂರ್ನಾಲ್ಕು ದಿನ ಎಲ್ಲ ಮೀಟಿಂಗ್‌ಗೆ ಬಂದರೂ ಪೂರ್ಣ ಪ್ರಮಾಣದ ಒಳಗೊಳ್ಳುವಿಕೆ ಇರಲಿಲ್ಲ. ಮತ್ತೆ ಅದನ್ನು ಯಾರೂ ಅಪೇಕ್ಷಿಸುತ್ತಿರಲಿಲ್ಲ ಕೂಡ.

ಎರಡು ವಾರದ ಈ ಸಮಯದಲ್ಲಿ ಸೀಯೊನಳ ಬಿಳುಚಿಕೊಂಡ ನಗೆ ತನ್ನ ಮೂಲ ಸ್ಥಿತಿಗೆ ಬರುತ್ತಿರುವುದನ್ನು ಕಂಡ ಗುರುಪಾದನಿಗೆ ಏನೋ ಒಂದು ರೀತಿ ಸಮಾಧಾನ. ಇದೇ ಶುಕ್ರವಾರದ ಕೊನೆಯ ಡೆಲಿವರಿಗೆ ಮೊದಲು ಆಗುವ ಎಲ್ಲ ಡಿಪಾರ್ಟ್‌ಮೆಂಟಿನ ಒಪ್ಪಿಗೆ ಮೀಟಿಂಗ್‌ಗೂ ಅವಳು ಬಂದಳು. ಸುಮಾರು ಮೂವತ್ತಕ್ಕೂ ಹೆಚ್ಚು ಜನ ಆ ಮೀಟಿಂಗ್‌ನಲ್ಲಿ ಕುಳಿತು ಆ ದೊಡ್ಡ ಸ್ಕ್ರೀನನ್ನು ನೋಡುತ್ತಿದ್ದರು. ಡೆಲಿವರಿಗೆ ಇನ್ನು ಎರಡು ದಿನ ಕೆಲಸ ಮಾಡುವುದು ಬಾಕಿ ಇದ್ದರೂ ತಮ್ಮೆಲ್ಲ ಆಗಿರುವ ಕಾರ್ಯವನ್ನು ಒಂದೆ ಅಸ್ಸೆಂಬ್ಲಿ ಮೊಬೈಲ್‌ನಲ್ಲಿ ಹಾಕಿ ತೋರಿಸುತ್ತಿದ್ದರು. ಆದರೆ, ಯಾರೂ ನಿರೀಕ್ಷಿಸದ, ಅದರಲ್ಲಿ ಸೀಯೊನ್ ಮಾಡಿದ ಕೆಲಸ ಮಾತ್ರ ಏನೂ ಮುಗಿಯದೇ ಹಾಗೂ ಕಣ್ಣ ಎದುರೇ ಸುಲಭವಾಗಿ ಉಳಿದವರೆಲ್ಲರೂ ಬೊಟ್ಟುಮಾಡುವಂತ ತಪ್ಪುಗಳು ರಾಚುತ್ತಿದ್ದವು. ಅದನ್ನು ಅರ್ಥ